ದೊರೆಯುತ್ತದೆ" ಎಂದು ಪೊಲೀಸರೂ ವಕೀಲರೂ ಫೋನ್‌ನಲ್ಲಿ ಹೇಳಿದರು.

ನ್ಯಾಯವೆಂದರೆ... ಏನಾಗಬಹುದು... ಮೈನರ್‌ಗಳಿಗೆ ಯಾವ ಶಿಕ್ಷೆ ವಿಧಿಸಬಹುದು.

ಅವರಾರು ಒಂದು ಕ್ಷಣವೂ ನನ್ನೊಂದಿಗೆ ಮನುಷ್ಯರಂತೆ ನಡೆದುಕೊಳ್ಳಲಿಲ್ಲ. ಅಪ್ರಾಪ್ತರೆಂದು ಅವರಿಗೆ ಕಡಿಮೆ ಶಿಕ್ಷೆಯನ್ನು ವಿಧಿಸಬಹುದು. ಆದರೆ, ಅವರು ಎಷ್ಟು ಕ್ರೂರವಾಗಿ ನಡೆದುಕೊಂಡರು. ಮುಖ್ಯವಾಗಿ ಅವರಲ್ಲಿ ಎಲ್ಲಕ್ಕಿಂತಲೂ ಸಣ್ಣವನು, ಅವನೇ ತಾನೆ ನನ್ನ ಮೇಲೆ ಮೊದಲಿಗೆ ಎರಗಿದ್ದು. "ಜೀರೋ ಸೈಜ್ ಅಲ್ಲಲೇ..." ಎನ್ನುತ್ತಾ ಅವನು ತನ್ನ ತೊಡೆಗಳ ನಡುವೆ ಕೂತು ಎರಡೂ ಕೈಗಳಿಂದ ಗಟ್ಟಿಯಾಗಿ ತನ್ನ ಎದೆಯನ್ನು ಕ್ರೂರವಾಗಿ ಹಿಚುಕುತ್ತಾ ಉಳಿದವರನ್ನು ಒಮ್ಮೊಮ್ಮೆ ಹಿಚುಕುವಂತೆ ಹೇಳಿ ಅವನು ಏನೆಲ್ಲಾ ಅಶ್ಲೀಲವಾಗಿ ಮಾತಾಡಿದ. ಅವನು ಹುಡುಗನೇ! ಉಳಿದ ಅಪ್ರಾಪ್ತರು ಎಷ್ಟು ಅಸಭ್ಯವಾಗಿ ನಡೆದುಕೊಂಡರು. ಅವರಿಗೆ ಯಾವ ಶಿಕ್ಷೆ ವಿಧಿಸಬಹುದು. ಎಲ್ಲ ರೀತಿಯ ನೀಚತನಕ್ಕೂ ಅಷ್ಟು ಬೇಗನೆ ತೆರೆದುಕೊಂಡ ಆ ಅಪ್ರಾಪ್ತರು... ಇಷ್ಟು ಕ್ರೂರವಾಗಿ ನಡೆದುಕೊಂಡಿರುವಾಗ ಅವರನ್ನು ಅಪ್ರಾಪ್ತರೆನ್ನಲಾದೀತೆ.

"ಇಂದು ನಾನು ನನ್ನ ಓವರೀಸನ್ನು, ಗರ್ಭಾಶಯವನ್ನು ಕಳೆದುಕೊಳ್ಳಲು ಕಾರಣರಾದವರಾದರೂ ಯಾರು. ಆ ಅಪ್ರಾಪ್ತ ಬಾಲಕನೇ ತಾನೆ."

"ಅವನು ತನ್ನ ಗೆಳೆಯರನ್ನು ಉತ್ಸಾಯಿಸುತ್ತಾ ತನ್ನೊಳಗೆ ಅವನ ಕೈಗಳನ್ನು ಹಾಕಿ ಕ್ರೂರವಾಗಿ ನಡೆದುಕೊಳ್ಳುತ್ತಿದ್ದರೆ ಅದನ್ನೆಲ್ಲಾ ನೋಡುತ್ತಿದ್ದ ಚೈತನ್ಯ ಪ್ರಜ್ಞೆ ಕಳೆದುಕೊಂಡ. ಹೌದು ಇವರೆಲ್ಲ ಸಣ್ಣ ಶಿಕ್ಷಯೊಂದಿಗೆ ಪಾರಾಗಬಹುದು. ಕೆಟ್ಟ ಪರಿಸ್ಥಿತಿಗಳಲ್ಲಿ ಬಾಲ್ಯವನ್ನು ಕಳೆದುಕೊಂಡ ಮಕ್ಕಳು ಹಸಿವಿಗೆ ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ತಮ್ಮನ್ನು ಕಾಪಾಡಿಕೊಳ್ಳಲು ದಾಳಿ ಮಾಡುವುದು, ಕೊಲೆ ಮಾಡುವುದು ಇವೆಲ್ಲವೂ ಒಂದು ರೀತಿ. ನನ್ನ ಮೇಲೆ ನಡೆದದ್ದು ಅದಲ್ಲವಲ್ಲ. ಎಲ್ಲರೂ ಚರ್ಚಿಸುವಂತೆ ಭಯಂಕರವಾಗಿ ಹಿಂಸಿಸಲ್ಪಟ್ಟ ನಾನು ಅವರ ಹಕ್ಕುಗಳ ಕುರಿತು ಮಾತನಾಡಲಾರೆನಲ್ಲ ಜಿವಿ" ಎಂದೆ.

ಜಿವಿ ಶ್ರದ್ಧೆಯಿಂದ ಕೇಳುತ್ತಿದ್ದರು. "ಅವರಿಗೆ ಯಾವ ಶಿಕ್ಷೆ ಆಗಬೇಕೆಂದುಕೊಳ್ಳುವೆ..." ಸ್ವಲ್ಪ ಹೊತ್ತು ಗಲ್ಲು ಶಿಕ್ಷೆಯಾಗಬೇಕೆಂದುಕೊಳ್ಳುವೆ. ಮತ್ತೆ ಸ್ವಲ್ಪ ಹೊತ್ತಿಗೆ ಅವರ ಮುಖದ ಮೇಲೆ ಉಗಿಯಬೇಕೆನಿಸುತ್ತದೆ. ಅವರು ಜೀವನ ಪರ್ಯಂತ ಜೈಲಿನಲ್ಲಿರಬೇಕೆನಿಸುತ್ತದೆ. ಅಷ್ಟರಲ್ಲೇ ಅವರಿಗೆ ನ್ಯಾಯ ಸಿಗಬೇಕೆಂದು ಬಯಸುವವರಿಗೆ ಅವರನ್ನು ಒಪ್ಪಿಸಬೇಕೆನಿಸುತ್ತದೆ. ಅವರನ್ನು ನಮ್ಮ ತಂದೆತಾಯಿಗಳಿಗೆ ಒಪ್ಪಿಸಿದರೆ... ನನ್ನ ಆಲೋಚನೆ ಬದಲಾದಂತೆಲ್ಲ ಅವರಿಗೆ ಎಂತಹ ಶಿಕ್ಷೆ ಆಗಬೇಕೆಂದು ಬಯಸುತ್ತಿರುವುದು ಬದಲಾಗುತ್ತಿದೆಯೆಂದು ಅರ್ಥವಾಗುತ್ತಿದೆ. ಯಾವ ಶಿಕ್ಷೆಯಾದರೆ ಒಳ್ಳೆಯದು... ಅವರ ಬಗ್ಗೆ ಏನು ಯೋಚಿಸುತ್ತಿರುವೆ... ಸ್ಕ್ಯಾನ್ ಮಾಡಿದರೆ ತಿಳಿಯುತ್ತದೆಯಲ್ಲಾ. ನನ್ನ ಮನಸ್ಸನ್ನು ಸ್ಕ್ಯಾನ್ ಮಾಡಿದ್ದರೆ ಚೆನ್ನಾಗಿತ್ತು. ಅವರಿಗೆ ಶಿಕ್ಷೆ ವಿಧಿಸುವುದರಿಂದ ನನಗೊದಗುವ ನ್ಯಾಯವಾದರೂ ಏನು.

"ನನ್ನನ್ನು ನಡುಬೀದಿಗೆ ತಂದು ನಿಲ್ಲಿಸಿದ ಅವರಿಗೆ ಯಾವ ಶಿಕ್ಷೆ ಸಾಕಾದೀತು. ವಿಧಿಸಿದ ಶಿಕ್ಷೆಯಿಂದ ಮುಕ್ತರಾದ ಅವರು ನಂತರ ತಮ್ಮ ಜೀವನದ ಕೊನೆಯವರೆಗೂ ಏನುತ್ತರ ಕೊಡಬಲ್ಲರು? ಏನೋ. ಯಾವ ಶಿಕ್ಷೆ ವಿಧಿಸಿದರೆ ನನ್ನ ಈ ಕನಸುಗಳ ನಾಶಕ್ಕೆ ನ್ಯಾಯ ಒದಗೀತು ಜಿವಿ" ಎಂದು ಕೇಳುತ್ತಿದ್ದರೆ ಅವರು ನನ್ನೆರಡು ಕೈಗಳನ್ನು ಹಿಡಿದು "ಪ್ಲೀಸ್ ಕೂಲ್ ಡೌನ್. ಐ ಕ್ಯಾನ್ ಅಂಡರ್ ಸ್ಟ್ಯಾಂಡ್. ಅತ್ಯಾಚಾರದ ಕಾಯಿದೆಯಲ್ಲಿ ಬಂದ ಪ್ರತಿಯೊಂದು ಕಾನೂನಾಗಲಿ, ಇಲ್ಲವೆ ಮಾಡಿದ ತಿದ್ದುಪಡಿಗಳಾಗಲಿ, ಅವು ಭನ್ವಾರಿದೇವಿ ಪ್ರಕರಣ, ಮಧುರಾ ಪ್ರಕರಣ ಹೀಗೆ